49 ಪ್ರಶ್ನೆಗಳ ಪೈಕಿ 47 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ. (ಅನುಬಂಧ-ಅ)

ಅಧ್ಯಕ್ಷರು: ಮಂಡಿಸಲಾಯಿತು. ಈಗ ಚುನಾವಣಾ ಪ್ರಸ್ತಾವನ್ನು ಮಂಡಿಸುವುದು. ಮಾನ್ಯ ಕಾನೂನು ಸಚಿವರು ಮಂಡಿಸಬೇಕು.

2. ಚುನಾವಣಾ ಪ್ರಸ್ತಾವ:

ಶ್ರೀ ಸಿ ಎಂ ಉದಾಸಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ 1995 ಅನ್ನು ಅನುಷ್ಠಾನಗೊಳಿಸಲು ರಚಿಸಲಾಗಿರುವ ರಾಜ್ಯ ಸಮನ್ವಯ ಸಮಿತಿಗೆ, ಅಂಗವಿಕಲರ ಅಧಿನಿಯಮದ ಕಲಂ 13(2)(ಜಿ) ರಲ್ಲಿನ ಅವಕಾಶದಂತೆ ಇಬ್ಬರು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು:- ಮಂಡಿಸಲಾಯಿತು. ಈ ನಿಯಮ 69 ರ ಮೇರೆಗೆ ಚರ್ಚೆ. ವಿರೋಧ ಪಕ್ಷದ ನಾಯಕರು ಮಾತನಾಡಬೇಕು. ಈಗಾಗಲೇ 1 ಗಂಟೆ 39 ನಿಮಿಷಗಳವರೆಗೆ ಚರ್ಚೆಯಾಗಿದೆ.

3. ನಿಯಮ 69ರ ಮೇಲೆ ಮುಂದುವರಿದ ಚರ್ಚೆ:

ವಿಷಯ: **ಲೋಕಾಯುಕ್ತರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿರುವ ಬಗ್ಗೆ.**

ಶ್ರೀ ಸಿದ್ದರಾಮಯ್ಯ(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರು ಇದರಲ್ಲಿ ನೀವು ಟೈಂ ರಿಸ್ಟ್ರಿಕ್ಟ್ ಮಾಡಬೇಡಿ.

ಅಧ್ಯಕ್ಷರು: ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಸೋಮವಾರ ಉತ್ತರ ಕೊಡಬೇಕು.

ಶ್ರೀ ಸಿದ್ದರಾಮಯ್ಯ: ಅವರು ಯಾವಾತ್ತಾದರೂ ಉತ್ತರ ಕೊಡಲಿ. ಸೋಮವಾರವಾದರೂ ಕೊಡಲಿ ಅಥವಾ ಮಂಗಳವಾರವಾದರೂ ಕೊಡಲಿ. ಸೋಮವಾರ ಬಹಳ ಸದಸ್ಯರು ಇನ್ನೂ ಮಾತನಾಡುವವರು ಇದ್ದಾರೆ. ಆ ಕಡೆಯವರು ಮಾತನಾಡಬೇಕು ಮತ್ತು ಈ ಕಡೆಯವರು ಕೂಡ ಮಾತನಾಡಬೆಕು. ಆದುದರಿಂದ ಮಂಗಳವಾರ ಮುಖ್ಯಮಂತ್ರಿಗಳು ಉತ್ತರ ಕೊಡುವಂತೆ ನೀವು ಅವರಿಗೆ ಹೇಳಿ. ಮಾನ್ಯ ಮುಖ್ಯಮತ್ರಿಗಳೇ ನಿನ್ನೆಯ ದಿವಸ ಮಾತನಾಡುವಾಗ